ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್.—ಸ್ವಾಮಿ, ಮಾನ್ಯ ಮುಖ್ಯಮಂತ್ರಿಗಳು ಈ ಸಂಬಂಧದಲ್ಲಿ ಒಂದು ಶಿಫಾರನ್ನು ಮಾಡುತ್ತೇವೆ ಎಂದು ಬಹಿರಂಗ ಸಭೆಯಲ್ಲಿ ಉತ್ತರ ಹೇಳಿದರು. ಒಂದು ಸಾರಿ ಶಿಫಾರನ್ನು ಮಾಡಿದ್ದಾರೆಯೇ, ಎರಡು ಸಾರಿ ಶಿಫಾರನ್ನು ಮಾಡಿದ್ದಾರೆಯೇ ?

ಶ್ರೀ ಜಿ. ನಾರಾಯಣ ಗೌಡ.—1959ರಿಂದ ಕೇಂದ್ರ ಸರ್ಕಾರದವರು ಆಗಾಗ್ಗೆ ಕೇಳುತ್ತಾ ಇರುವುದರ ಮೇಲೆ ರಾಜ್ಯಪರ್ಕಾರದವರು ಕೆಲವು ನೂಚನೆಗಳನ್ನು ಕಳುಹಿಸಿಕೊಟ್ಟಿರುತ್ತಾರೆ.

ಶ್ರೀ ಜಿ. ದುಗ್ಗಪ್ಪ.—ತಾವು ಹೇಳಿದ ಪ್ರಕಾರ ನೂಚನೆ ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದೀರಿ. ಏನು ನೂಚನೆ ಕೊಟ್ಟಿದ್ದೀರಿ ?

ಶ್ರೀ ಜಿ. ನಾರಾಯಣ ಗೌಡ.—2-3 ನೂಚನೆಗಳು ಇವೆ. ಅದಕ್ಕೋಸ್ಕರವಾಗಿ ಅದನ್ನೇ ಒಂದು ಪ್ರಶ್ನೆಯಾಗಿ ಕೇಳಿದರೆ ವಿಶದವಾಗಿ ಹೇಳಬಹುದು.

Sri B. P. GANGADHAR.—Is the Government contemplating to remove any community from Scheduled Class list ?

Sri G. NARAYANA GOWDA.—The State Government as such cannot remove.

Facilities to Scheduled Castes

*Q.—706. **Sri S. S. ARAKERI** (Ballolli).—

Will the Minister for Municipal Administration be pleased to state :—

(*a*) whether it is a facility was given to the people of Scheduled Caste to pay the value of the sites allotted to them by the Trust Board in instalments within six years ;

(*b*) whether the above facility was withdrawn and if so, why ;

(*c*) the reasons for cancellation of G.O. No. LLH 319 LAQ 58, dated 27th January 1961 ;

(*d*) whether the pros and cons of this matter was considered by the Hon'ble Minister and the Government ;

(*e*) the number of Scheduled Caste population affected by the cancellation of this special benefit ;

(*f*) the action they propose to take to redress the grievance of such people ;

(*g*) whether the Government proposes to allot the sites to the scheduled caste people at 50 per cent of the value ?

*A.—**Sri R. M. PATIL** (Minister for Municipal Administration).—

(*a*) Yes.
(*b*) No.
(*c*) It is not cancelled.
(*d*) Yes.
(*e*) Does not arise.
(*f*) Does not arise.
(*g*) No.

ಶ್ರೀ ಎಸ್. ಎಸ್. ಅರಕೇರಿ.—ಈ ಸೈಟುಗಳನ್ನು ಕೊಡುತ್ತಾ ಇದ್ದಾರೆ. ಈ ಹಣವನ್ನು 6 ವರ್ಷದೊಳಗೆ ಕೊಡಬೇಕು ಎಂದು ಸರ್ಕಾರಿ ಆಜ್ಞೆ ಇದೆ, ಅದು ರದ್ದಾಗಿಲ್ಲ ಎಂದು ಹೇಳುತ್ತೀರಿ. ಇದು ಟ್ರಸ್ಟ್‌ಬೋರ್ಡ್ ಅಧಿಕಾರಿಗಳ ಗಮನದಲ್ಲಿ ಇದೆಯೇ ?

ಶ್ರೀ ಆರ್. ಎಂ. ಪಾಟೀಲ್.—ಆ ಆಜ್ಞೆಯಲ್ಲಿ ಎಲ್ಲಿಯವರೆಗೆ ಅಮರ್ ಬಜಾವಣೆ ಇದೆಯೋ ಅಲ್ಲಿಯವರೆಗೆ ಕೊಟ್ಟಂಥ ಸೈಟ್ ಬಗ್ಗೆ ಯಾವ ತರಹ ಅಭ್ಯಂತರವೂ ಇಲ್ಲ. ಅದು ಕ್ಯಾನ್ಸಲ್ ಮಾಡಿಲ್ಲ. 27-1-1961 ರಿಂದ 21-2-1964 ರವರೆಗೆ ಅಮರ್ ಬಜಾವಣೆಯಲ್ಲಿ ಇತ್ತು.

ಶ್ರೀ ಎಸ್. ಎಸ್. ಅರಕೇರಿ.—1964 ರ ಮೇಲೆ ಜಿ. ಓ. ಕ್ಯಾನ್ಸಲ್ ಮಾಡಿಲ್ಲ ಎಂದು ಹೇಳುತ್ತೀರಿ. ಆದರೆ ಅದು ಅಮರ್ ಬಜಾವಣೆಯಲ್ಲಿ ಇಲ್ಲ ಎಂದು ಹೇಳುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ಕ್ಯಾನ್ಸಲ್ ಆಗಿಲ್ಲ ಹೊಸ ಜಿ. ಓ. ಮಾಡಿದ್ದು.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಜಾರಿಯಲ್ಲ ಇರುವ ಆರು ವರ್ಷಗಳ ನಿಯಮ ಟ್ರಸ್ಟ್‌ಬೋರ್ಡ್ ಯೂನಿಫಾರಂ ರೂಲ್ಸ್ ಮಾಡಿದಾಗ ಇದ್ದಕ್ಕಿದ್ದ ಹಾಗೆ ರದ್ದು ಆಗಿದೆ ಅಲ್ಲವೆ ?

ಶ್ರೀ ಆರ್. ಎಂ. ಪಾಟೀಲ್.—24-2-1964 ರಲ್ಲಿ ಈ ಜನರಲ್ ರೂಲ್ಸ್ ಮಾಡಿದರು. ಆ ಜನರಲ್ ರೂಲ್ಸ್ ಪ್ರಕಾರ ಹರಿಜನರಿಗೆ ಯಾವ ಸವಲತ್ತು ಕೊಡಬೇಕು ಆ ಸವಲತ್ತು ವಿಚಾರ ಮಾಡಿ ಕೊಡತಕ್ಕ ಸೈಟುಗಳಲ್ಲಿ 100ಕ್ಕೆ 5 ರಷ್ಟು ರಿಸರ್ವ್‌ಮಾಡಿದ್ದಾರೆ. ಮತ್ತು ಶೇಕಡ 6¼ ಪರ್ಸೆಂಟು ಹಣ ಮೊದಲನೇ ಕಂತು ತೆಗೆದುಕೊಳ್ಳಬಹುದು ಎಂದು ಮಾಡಿದ್ದಾರೆ.

ಶ್ರೀ ಎ. ಮುನಿಯಪ್ಪ.—ಒಂದು ಕಂಡೀಷನ್ ಮೇಲೆ ಯಾರಾದರೂ ಕಂತು ಕೊಡುವುದಕ್ಕಾಗುವುದಿಲ್ಲ ಎಂದು ನೋಟೀಸ್ ಕೊಟ್ಟಿದ್ದರೆ ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಮುಂಜೂರು ಮಾಡುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—1961 ರ ಜಿ. ಓ. ಅನ್ವಯ ಯಾವ ಯಾವ ಸೈಟುಗಳನು ಕೊಟ್ಟಿದೆ ಅವಕ್ಕೆ ಯಾವ ರೀತಿಯಿಂದಲೂ ನ್ಯೂನತೆ ಬಾರದಂತೆ ನೋಡಿಕೊಳ್ಳಲಾಗುವುದು.

ಶ್ರೀ ಎಸ್. ಎಸ್. ಅರಕೇರಿ.—ಈಗ ಈ ಜಿ.ಓ. ದ ಅನುಕೂಲ ಇನ್ನು ಮುಂದಾದರೂ ಎಕ್ಸ್‌ಟೆಂಡ್ ಮಾಡುವುದನ್ನು ತಾವು ವಿಚಾರ ಮಾಡುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ಆ ಜಿ. ಓ. ಈಗಾಗಲೇ ಜಾರಿಯಲ್ಲಿದೆ.

Sri B. P. GANGADHAR.—Sir, many a time sites are allotted and there will be no structures coming up because of the proverty of the Scheduled caste people. Therefore can the Government consider the question of constructing the houses and giving them to those people ? You can collect moneys afterwards.

Sri R. M. PATIL.—That cannot be done, because the City Improvement Trust Board has to borrow money for acquisition of lands to prepare sites. Such sites shall have to be allotted on a no-profit and no-loss basis. Therefor it is not possible to make any further concession.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಸುಮಾರು 5-6 ಲಕ್ಷ ಪ್ರಜಾಸಂಖ್ಯೆಯವರಾದ ಹರಿಜನ ಮತ್ತು ಗಿರಿಜನರು, ಹಾಗೂ ನಿಮ್ನ ಪಂಗಡಕ್ಕೆ ಸೇರಿದವರು, ಬೆಂಗಳೂರಿನಲ್ಲಿ ವಾಸ ಮಾಡುತ್ತಿರುವುದರಿಂದ, ಅದರಲ್ಲಿ ಲಕ್ಷೋಪಲಕ್ಷ ಜನರಿಗೆ ವಸತಿ ಇರುವುದಿಲ್ಲ. ಅವರೆಲ್ಲರಿಗೂ 6 ವರ್ಷದ ಕಂತುಗಳ ರೂಪದಲ್ಲಿ ಕೊಡುವುದಲ್ಲದೆ, 100ಕ್ಕೆ 18 ಭಾಗ ಕೊಡುವ ಒಂದು ಅವಕಾಶ ಕಲ್ಪಿಸಿ ಕೊಡುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ಅದೆಲ್ಲಾ ವಿಚಾರ ಮಾಡಿ ಮಾಡಿದ್ದಾರೆ.